ಕರ್ನಾಟಕ ವಿಧಾನ ಸಭೆ ಪತ್ರಿಕಾ ತುಣುಕುಗಳು ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE : 16/07/2019

## ಸ್ಪೀಕರ್ ಮಾತನಾಡುತ್ತಿದ್ದಾರೆ....



# ನಾನು ಜನಪಕ್ಷಪಾತಿ ಸಂವಿಧಾನಕ್ಕೆ ಮಾತ್ರ ಬದ್ಧ

ಸಂ. ಕ. 16-7-19

**ಸದ್ಯದ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ವಿಧಾನಸಭಾಧ್ಯಕ್ಷ ರಮೇಶ್‌ಕುಮಾರ್ ತಮ್ಮ ಮನದಾಳದ ಮಾತನ್ನು ಸೋಮವಾರ ಶಾಸನ ಸಭೆಯಲ್ಲಿ ಆಡಿದರು. ಶಾಸಕರ ರಾಜೀನಾಮೆ ವಿಷಯದಲ್ಲಿ ತಾವು ನಿರ್ವಹಿಸಿದ ಪಾತ್ರ ಸಮರ್ಥಿಸಿಕೊಂಡರು. ಸದ್ಯದ ರಾಜಕೀಯ ಪರಿಸ್ಥಿತಿ ಬಗ್ಗೆ ನೋವು, ವಿಷಾದದಿಂದ ಕೂಡಿದ ಅವರ ಮಾತು ಟೀಕಾಕಾರರಿಗೂ ಉತ್ತರ ಹೇಳಿತ್ತು. ಅವರ ಮಾತಿನ ಪೂರ್ಣ ಪಾಠ.**

## ಗೌರವಾನ್ವಿತ ಸದಸ್ಯರೇ,

ಜುಲೈ 12ರಂದು ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಸಭಾನಾಯಕರು (ಸಿಎಂ) ಸದ್ಯ ರಾಜ್ಯದಲ್ಲಿ ಉದ್ಭವಿಸಿರುವ ಪರಿಸ್ಥಿತಿ ಹಿನ್ನೆಲೆಯಲ್ಲಿ ಸಭೆಯ ವಿಶ್ವಾಸಮತ ಗಳಿಸಲು ತಾವು ಮುಂದಾಗಿರುವುದಾಗಿ ಹೇಳಿದರು. ಅದಾದ ನಂತರ ಪದ್ಧತಿ ಪ್ರಕಾರ ಸದನ ಕಲಾಪ ಸಮಿತಿ ಸಭೆ ಸೇರಿತು. ಆ ಸಭೆಯಲ್ಲಿ ಮುಖ್ಯಮಂತ್ರಿಗಳು ವಿಶ್ವಾಸಮತ ಯಾಚನೆಗೆ ತಮಗೆ ಸಮಯ ನಿಗದಿ ಮಾಡಿಕೊಡುವಂತೆ ಕೋರಿದರು. ದುರಾದೃಷ್ಟವಶಾತ್ ಆ ಸಭೆಗೆ ವಿರೋಧ ಪಕ್ಷದ ನಾಯಕರು ಬಂದಿರಲಿಲ್ಲ. ಈ ವಿಚಾರದಲ್ಲಿ ಏಕಪಕ್ಷೀಯ ನಿರ್ಣಯ ಸಾಧ್ಯವಿಲ್ಲ. ವಿರೋಧ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಹೇಳಿದೆ. ಈ ನಡುವೆ ಬಿಜೆಪಿಯ ಮಾಧುಸ್ವಾಮಿ, ಕೆಜಿ ಬೋಪಯ್ಯ, ಸಿಎಂ ಉದಾಸಿ ಅವರುಗಳು ಸರ್ಕಾರದ ವಿರುದ್ಧ ಅವಿಶ್ವಾಸ ಮಂಡನೆಗೆ ಸಮಯ ಅವಕಾಶ ಕೋರಿದರು. ವಿಶ್ವಾಸಮತ ಯಾಚನೆ ಹಾಗೂ ಅವಿಶ್ವಾಸ ಮಂಡನೆ ಎರಡರ ಉದ್ದೇಶವೂ ಒಂದೇ ಆಗಿರುತ್ತದೆ. ನಿಯಮಾವಳಿ ಪ್ರಕಾರ ಮುಖ್ಯಮಂತ್ರಿಗಳು ಗೊತ್ತುವಳಿ ಸಲ್ಲಿಸಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡೋಣ ಎಂದು ನಾನು ಹೇಳಿದೆ. ಅದಕ್ಕೆ ಅವರು ಒಪ್ಪಿದರು. ಆಗ ಎಷ್ಟು ದಿನ ಅವಕಾಶ ನೀಡಬೇಕು ಎಂಬ ಚರ್ಚೆಯೂ ಬಂತು. ಸಂಸತ್ತಿನಲ್ಲಿ ಇಂತಹ ಗೊತ್ತುವಳಿ ಮಂಡನೆ ಆಗಿ 10 ದಿನಗಳ ಒಳಗೆ ಸಮಯ ನಿಗದಿ ಆಗಬೇಕು. ಅದು ಚರ್ಚೆ ಆಯಿತು ಅಂತ ನಾಲ್ಕು ದಿನದಲ್ಲಿ ಮಂಡಿಸಲು ತೀರ್ಮಾನ ಆಗಿದೆ. ಅದರಂತೆ ಗುರುವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಗಳು ವಿಶ್ವಾಸಮತ ಯಾಚನೆ ಗೊತ್ತುವಳಿ ಮಂಡಿಸಲಿದ್ದಾರೆ.

ಮುಖ್ಯಮಂತ್ರಿಗಳಿಗೆ ವಿಶ್ವಾಸಮತ ಯಾಚನೆಗೆ ಅವಕಾಶ ನೀಡಿರುವಾಗ ಅಲ್ಲಿಯವರೆಗೆ ಸದನ ಕಲಾಪ ನಡೆಯಬೇಕೇ? ಬೇಡವೇ? ಎನ್ನುವ ಬಗ್ಗೆ ಸಹ ಚರ್ಚೆ ಆಯಿತು. ಸಂಸತ್ತಿನಲ್ಲಿ ಇಂತಹದೇ ಸಂದರ್ಭ ಸೃಷ್ಟಿಯಾದಾಗ ಯಾವ ಹಾದಿ ತುಳಿಯಲಾಗಿತ್ತು ಎಂದು ಪರಿಶೀಲಿಸಿದೆವು. ಕಲಾಪ ನಡೆಸಬಹುದು. ಇಲ್ಲವಾದರೆ ಬೇರೆ ಸದಸ್ಯರ ಹಕ್ಕು ಮೊಟಕಾಗುತ್ತದೆ ಎಂಬ ಅಭಿಪ್ರಾಯ ಮಂಡಿಸಲಾಯಿತು. ಆದರೆ ಹಾಗೆ ಮಾಡಿದರೆ ನಾವು ಕಲಾಪದಲ್ಲಿ ಭಾಗವಹಿಸುವುದಿಲ್ಲ ಎಂದು ವಿರೋಧ ಪಕ್ಷದ ನಾಯಕ ಯಡಿಯೂರಪ್ಪ ಅವರು ಹೇಳಿದರು. ಪ್ರತಿಪಕ್ಷದವರ ಭಾಗವಹಿಸುವಿಕೆ ಇಲ್ಲದಾಗ ಕಲಾಪ ನಡೆಸಿದರೆ ಅದಕ್ಕೆ ಗೌರವ ಇರುವುದಿಲ್ಲ ಎನ್ನುವುದು ನನ್ನ ಖಚಿತ ಅಭಿಪ್ರಾಯ. ನಾನು ತೆಗೆದುಕೊಂಡ ನಿರ್ಣಯ ಸರಿ ಇದ್ದರೆ ಸರಿ ಎನ್ನಿ. ತಪ್ಪಿದ್ದರೆ ತಪ್ಪೆನ್ನಿ. ಕಾಲ ಎಲ್ಲವನ್ನೂ ನಿರ್ಣಯ ಮಾಡುತ್ತದೆ.

ಅವರು (ಸರ್ಕಾರ) ಸೋತಿಲ್ಲ. ನೀವು (ಪ್ರತಿಪಕ್ಷ) ಗೆದ್ದಿಲ್ಲ. ಆ ಸೋಲು ಗೆಲುವಿನ ನಿರ್ಣಯ ಆಗೋದು ಸದನದಲ್ಲಿ. ಈ ಚದುರಂಗದಾಟದಲ್ಲಿ ಯಾರು ಗೆಲ್ಲುತ್ತೀರಿ. ಯಾರು ಸೋಲುತ್ತೀರಿ ಎನ್ನುವುದು ನನಗೆ ಸಂಬಂಧಿಸಿಲ್ಲ. ಆದರೆ ನನ್ನ ಬಗ್ಗೆ ಬಳಸುವ ಭಾಷೆ ವಿಷಯದಲ್ಲಿ ಎಚ್ಚರ ಇರಲಿ.

ಆದರೆ ಜನ ತಮ್ಮ ಪ್ರಾಣ ಒತ್ತೆಯಿಟ್ಟು ಈ ಸಂಸದೀಯ ಪ್ರಜಾಸತ್ತೆಯ ಸೌಭಾಗ್ಯ ನಮಗೆ ನೀಡಿದ್ದಾರೆ. ನಾವು ಫುಟ್‌ಬಾಲ್ ಆಡೋದು ಬೇಡ. ಈ ವಿಷಯಗಳಿಗೆಲ್ಲಾ ನಾನು ನನ್ನ ಸ್ಥಾನದ ಚೌಕಟ್ಟಿನ ಕಾರಣ ಹೆಚ್ಚು ಪ್ರತಿಕ್ರಿಯಿಸಲು ಆಗೋಲ್ಲ.

ನನ್ನ ಸೂಕ್ತ ತೀರ್ಮಾನವನ್ನು ಎಲ್ಲರೂ ಮೆಚ್ಚಲೇಬೇಕು. ನಾನು ಯಾರ ಪಂಗಡದಲ್ಲಿಯೂ ಇಲ್ಲ. ಸಂವಿಧಾನಕ್ಕೆ ಮಾತ್ರ ತಲೆ ಬಾಗಿದ್ದೇನೆ.